ಇ) ದಕ್ಷಿಣ ಕನ್ನಡ ಜಿಲ್ಲೆಯ ಯೂತ್ ಕಾಂಗ್ರೆಸ್ ಅಧ್ಯಕ್ಷರು ಪುತ್ತೂರು ತಾಲ್ಲೂಕು ಕಛೇರಿಯಲ್ಲಿ ವ್ಯಾಪಕ ಭ್ರಷ್ಟಾಚಾರಕ್ಕೆ ಅಲ್ಲಿನ ಶಾಸಕರ ಬೆಂಬಲವಿದೆಯೆಂದು ಆರೋಪಿಸಿರುವ ಬಗ್ಗೆ:-

ಶ್ರೀ ಡಿ.ವಿ. ಸದಾನಂದಗೌಡ(ಪುತ್ತೂರು):- ಮಾನ್ಯ ಅಧ್ಯಕ್ಷರೆ, ನನ್ನ ಒಂದೆರಡು ಪ್ರಮುಖ ಪ್ರಶ್ನೆಗಳೇನೆಂದರೆ, ಒಂದು ವೇಳೆ ಈ ರಾಜ್ಯದಲ್ಲಿ ಯಾವುದೇ ಭಾಗದಲ್ಲಿ, ಯಾವುದೇ ಇಲಾಖೆಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ವಿಚಾರ ಆಡಳಿತ ಪಕ್ಷದವರಿಗೆ ತಿಳಿದು ಬಂದರೆ, ಅವರು ಏನು ಮಾಡಬೇಕೆಂಬುದು ನನ್ನ ಪ್ರಶ್ನೆ. ಒಂದೋ ಭ್ರಷ್ಟಾಚಾರ ನಡೆದಿದೆ ಎಂದಾಗ ಭ್ರಷ್ಟ ಅಧಿಕಾರಿಗಳ ವಿರದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖಾ ವರಿಷ್ಟರಿಗೆ ಅಥವಾ ಮಂತ್ರಿಗಳಿಗೆ ತಿಳಿಸಬೇಕು, ಇಲ್ಲವೇ ಅವರು ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ವಿಷಯವನ್ನು ತರುವಂಥ ಕ್ರಮವನ್ನಾದರೂ ಮಾಡಬೇಕು. ಅದನ್ನು ಹೊರತಾಗಿ ಕೇವಲ ಪತ್ರಿಕೆಗಳ ಮೂಲಕ ಕಚೇರಿಗಳಲ್ಲಿ ಭ್ರಷ್ಟಾಚಾರವಿದೆ ಎಂದು ಪರೋಕ್ಷವಾಗಿ ಹೇಳಿ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ಮಾಡುವುದು ಸರಿಯೇ? ಎರಡನೆಯದಾಗಿ ಈ ರೀತಿಯಾಗಿ ಇಲಾಖೆಯಲ್ಲಿ ಭ್ರಷ್ಟಾಚಾರ ಇದೆ ಎಂದು ಹೇಳಿ, ಯಾವುದೇ ಹೇಳಿಕೆಗಳನ್ನು ಮಾಡುವುದರ ಮೂಲಕ ಅಲ್ಲಿ ಬೇರೆ ರೀತಿಯಲ್ಲಿ ರಾಜಕೀಯ ಮೈಲೇಜ್ ಪಡೆದುಕೊಳ್ಳುವ ರೀತಿಯಲ್ಲಿ ಇತರರ ಮೇಲೆ ಆರೋಪ ಹೊರಿಸುವುದು ಸರಿಯೇ? ಹೀಗೆ ಇತರರ ಮೇಲೆ ಗೂಬೆ ಕೂರಿಸುವಂಥ, ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂಥ ಕೆಲಸವನ್ನು ಮಾಡುವಂಥ ಒಂದು ಘಟನೆಯು ನಮ್ಮ ಪುತ್ತೂರಿನಲ್ಲಿ ನಡೆದಿದೆ. ಪತ್ರಿಕೆಗಳಲ್ಲಿ ಈ ಕುರಿತಾಗಿ ನನ್ನ ಹೆಸರು ನೇರವಾಗಿ ಉಲ್ಲೇಖವಾದುದುರಿಂದ ನಾನು ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದ.ಕ.ಜಿಲ್ಲೆಯ ಆಡಳಿತ ಪಕ್ಷದ ಒಬ್ಬ ಜವಾಬ್ದಾರಿಯುತ ಯೂತ್ ಕಾಂಗ್ರೆಸ್‌ನ ಅಧ್ಯಕ್ಷರು ಒಂದು ಪತ್ರಿಕಾ ಹೇಳಿಕೆಯನ್ನು ನೀಡುವುದರ ಮೂಲಕ ಪುತ್ತೂರಿನಲ್ಲಿ ಬಹಳ ಭ್ರಷ್ಟ ಅಧಿಕಾರಿಗಳು ಇದ್ದಾರೆ, ತಾಲ್ಲೂಕು ಕಚೇರಿಯು ಭ್ರಷ್ಟಾಚಾರದಿಂದ ಮುಳುಗಿದೆ, ಈ ಭ್ರಷ್ಟಾಚಾರದ ವಿರುದ್ಧ ನಾವು ಸಮರ ಸಾರುತ್ತೇವೆ. ಆದರೆ ಅಲ್ಲಿರುವಂಥ ಶಾಸಕರು ಮೌನವಹಿಸಿದ್ದಾರೆ ಇದೊಂದು ಪ್ರಶ್ನಾರ್ಥಕ ಚಿಹ್ನೆ ಎಂದು ಹೇಳುವ ರೀತಿಯಲ್ಲಿ ಪತ್ರಿಕೆಗಳಿಗೆ ಹೇಳುವುದರ ಮುಕಾಂತರ ಅಲ್ಲಿನ ಭ್ರಷ್ಟಾಚಾರವನ್ನು ಹೊರಗೆಡವುಂಥ ಪ್ರಯತ್ನವನ್ನು ಮತ್ತು ನನ್ನ ಮೇಲೆ ಕೂಡ... ಶಾಸಕ ಶ್ರೀ ಡಿ.ವಿ. ಸದಾನಂದಗೌಡರನ್ನು ಟೀಕಿಸಿದರು... ಎನ್ನುವ ರೀತಿಯಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಬರುವಂಥ ಸಂಗತಿಯಾಗಿದೆ. ನಾನು ಹೇಳುವಂಥಾದ್ದು ತಮ್ಮ ಸರಕಾರ ಪಾರದರ್ಶಕ ಸರಕಾರ. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇವೆಂದು ಹೇಳುವ ಸರಕಾರ ಈ ರೀತಿಯ ವ್ಯವಸ್ಥೆಗಳು ಇರುವಂಥ ಸಂದರ್ಭಗಳಲ್ಲಿ ತಮ್ಮ ಪಕ್ಷದ ಒಬ್ಬ ಜಿಲ್ಲಾ ಯೂತ್ ಕಾಂಗ್ರೆಸ್‌ನ ಅಧ್ಯಕ್ಷರು ಪತ್ರಿಕಾ ಹೇಳಿಕೆಗಳ ಮುಖಾಂತರ ಪುತ್ತೂರು ತಾಲ್ಲೂಕು ಕಚೇರಿಯಲ್ಲಿ ಗರಿಷ್ಠ ಭ್ರಷ್ಟಾಚಾರ ಇದೆ, "ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ತಾಲ್ಲೂಕು ಕಚೇರಿಯಲ್ಲಿ ಗರಿಷ್ಠ ಪ್ರಮಾಣದ ಭ್ರಷ್ಟಾಚಾರದ ಆರೋಪವಿದ್ದರೂ ಪುತ್ತೂರಿನ ಶಾಸಕ ಶ್ರೀ ಡಿ.ವಿ.ಸದಾನಂದಗೌಡರವರು ಏತಕ್ಕೆ ಮೌನ ವಹಿಸಿದ್ದಾರೆ ಎಂದು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರು ಪ್ರಶ್ನಿಸಿದ್ದಾರೆ" ಎಂದು ಹೇಳುವಂಥ ರೀತಿಯಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಖರ್ಗೆಯವರಲ್ಲಿ ಇಷ್ಟೇ

ಆಗ್ರಹ ಮಾಡಬಯಸುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳವರಿಗೂ ಕೂಡ ನಿನ್ನೆಯಲ್ಲ ಮೊನ್ನೆ ಪತ್ರವನ್ನು ಬರೆದಿದ್ದೇನೆ. ತಾವು ತಮ್ಮ ಸರಕಾರದಿಂದ ತಕ್ಷಣ ಇದನ್ನು ಲೋಕಾಯುಕ್ತ ತನಿಖೆಗೆ ಒಳಪಡಿಸಬೇಕು. ಪುತ್ತೂರಿನಲ್ಲಿರುವಂಥ ತಾಲ್ಲೂಕು ಕಛೇರಿ ಇರಬಹುದು, ಪುರಸಭೆ ಇರಬಹುದು ಅಥವಾ ಭ್ರಷ್ಟಾಚಾರ ಇರುವಂಥ ಯಾವುದೇ ಇಲಾಖಾ ಕಛೇರಿ ಇರಬಹುದು, ಅದನ್ನು ತಾವುಗಳು ತಕ್ಷಣ ಕಾಲಮಿತಿಯೊಂದಿಗೆ ವಿಚಾರಣೆಗೊಳಪಡಿಸಬೇಕು. ಆದರೆ ಸುಮ್ಮನೆ ಲೋಕಾಯುಕ್ತದ ತನಿಖೆಗೆ ಒಪ್ಪಿಸಿ ಕೋಲ್ಡ್ ಸ್ಟೋರೇಜ್‌ನಲ್ಲಿಡುವಂಥ ವ್ಯವಸ್ಥೆ ಆಗಬಾರದು. ನಾನು ಏಳೂವರೆ ವರ್ಷಗಳಿಂದ ಪುತ್ತೂರಿನಲ್ಲಿ ಶಾಸಕನಾಗಿದ್ದೇನೆ. ಆ ಅವಧಿಯಲ್ಲಿ ಯಾವುದೇ ಸಂದರ್ಭದಲ್ಲಿ ಈ ರೀತಿಯಾಗಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡುವಂಥ ಯಾವುದೇ ಕೆಲಸವನ್ನು ನಾನು ಮಾಡಿದ್ದೇನೆಯೇ ಹೇಳಿ?

ಛೇರ್ಮನ್:- ಆ ಸಂಬಂಧವಾದ ದಾಖಲೆಗಳಿದ್ದರೆ ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಿ.

ಶ್ರೀ ಡಿ.ವಿ. ಸದಾನಂದಗೌಡ:- ಆ ದಾಖಲೆಗಳನ್ನೆಲ್ಲಾ ತಮಗೆ ತಲುಪಿಸುತ್ತೇನೆ. ನಾನು ಸರ್ಕಾರವನ್ನು ಆಗ್ರಹ ಮಾಡುತ್ತೇನೆ. ಈ ವಿಚಾರವು ನನಗೆ ವೈಯುಕ್ತಿಕವಾಗಿ ಬಂದ ಕಾರಣ ನಾನು ಇದನ್ನು ತೀವ್ರವಾಗಿ ಪರಿಗಣಿಸಬೇಕಾಗಿದೆ. ಇಲ್ಲದಿದ್ದರೆ ನಾನು ಅಷ್ಟು ತೀವ್ರವಾಗಿ ಪರಿಗಣಿಸುತ್ತಿರಲಿಲ್ಲ. ಇಂಥ ಜನರು ಎಲ್ಲೆಲ್ಲಿ ಏನೇನೋ ಪತ್ರಿಕಾ ಹೇಳಿಕೆ ಮಾಡುವುದಕ್ಕೆ ... ಅವರಿಗೆ ಅದೇ ಕಸಬು, ಬೇರೆ ಏನೂ ಕಸಬು ಇರಲಿಕ್ಕಿಲ್ಲ... ಆದರೆ ನನ್ನ ಹೆಸರನ್ನು ನೇರವಾಗಿ ಉಲ್ಲೇಖ ಮಾಡಿರುವ ಹಿನ್ನೆಲೆಯಲ್ಲಿ ಈ ಸರ್ಕಾರವನ್ನು ಆಗ್ರಹ ಮಾಡುತ್ತಾ ಇದ್ದೇನೆ. ಪುತ್ತೂರಿನ ತಾಲ್ಲೂಕು ವ್ಯಾಪ್ತಿಯಲ್ಲಿರುವಂಥ ಎಲ್ಲಾ ಪ್ರಮುಖ ಇಲಾಖೆಗಳನ್ನು ತಾಲ್ಲೂಕು ಕಛೇರಿ, ಪುರಸಭೆ ಕಛೇರಿ ಇವುಗಳನ್ನು ಲೋಕಾಯುಕ್ತ ತನಿಖೆಗೆ ಒಳಪಡಿಸಬೇಕೆಂದು ಆಗ್ರಹ ಮಾಡುತ್ತೇನೆ. ಪತ್ರಿಕೆಗಳಲ್ಲಿ ಬಂದಂಥ ಎಲ್ಲಾ ಕಟ್ಟಿಂಗ್‌ಗಳನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಮಾನ್ಯ ಖಿರ್ಗೆಯವರು ಸರ್ಕಾರದ ಮತಿಯಿಂದ ಈ ಕೆಲಸವನ್ನು ಮಾಡಿಸಬೇಕೆಂದು ಹೇಳಿ ಆಗ್ರಹವನ್ನು ಮಾಡಬಯಸುತ್ತೇನೆ. ಹಾಗೆಯೇ ವೈಯುಕ್ತಿಕವಾಗಿ ಶಾಸಕರ ಚಾರಿತ್ರ್ಯಹರಣ ಮಾಡುವಂತಹ ಈ ರೀತಿಯ ಕೆಲಸ ಕಾರ್ಯಗಳ ಬಗ್ಗೆ ಸರ್ಕಾರ ನಿಗಾ ವಹಿಸಬೇಕು ಮತ್ತು ಅಂಥವರ ಮೇಲೆ ಕೂಡ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತಾ ನನ್ನ ಹತ್ತಿರುವ ದಾಖಲೆಗಳನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ.

ಛೇರ್ಮನ್:- ಸರ್ಕಾರ ಏನು ಕಡಿವಾಣ ಹಾಕಬೇಕೋ ಅದನ್ನು ಹಾಕುತ್ತದೆ.

ಶ್ರೀ ಡಿ.ವಿ.ಸದಾನಂದಗೌಡ:- ಇದರ ಬಗ್ಗೆ ತನಿಖೆಯಾಗಬೇಕು ಅಧ್ಯಕ್ಷರೇ, ಅಲ್ಲಿ ಭ್ರಷ್ಟಾಚಾರವಿದ್ದರೆ ಅದರ ಬಗ್ಗೆ ದಾಖಲೆಗಳನ್ನು ಕೊಡಲಿ.. ನಾನು ಕೂಡ ಬರೆಯುತ್ತಿದ್ದೇನೆ.

ಛೇರ್ಮನ್:- ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಅಲ್ಲಿ ಒಬ್ಬ ಜಿಲ್ಲಾ ಯೂತ್ ಕಾಂಗ್ರೇಸ್‌ನ ಅಧ್ಯಕ್ಷರು ಆಪಾದನೆ ಮಾಡಿದ್ದಾರೆ. ಅವರು ಆ ಕುರಿತು ಏನು ಮಾಹಿತಿಗಳು ಇದೆ ಅದನ್ನು ಕಳುಹಿಸಲಿ. ಆದ್ದರಿಂದ ಸರ್ಕಾರದವರು ದಯವಿಟ್ಟು ಅಲ್ಲಿ ಯಾರ್ಯಾರು ಭ್ರಷ್ಟ ಅಧಿಕಾರಿಗಳು ಇದ್ದಾರೆ ಅಂಥವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ತನಿಖೆಯನ್ನು ಮಾಡಬೇಕು. ಅವರು ಲೋಕಾಯುಕ್ತಕ್ಕೆ ಬರೆದಿದ್ದಾರೆ. ಲೋಕಾಯುಕ್ತಕ್ಕೆ ಸರ್ಕಾರವೂ ಒಪ್ಪಿಸಲಿ. ತಾವುಗಳೂ ಕೂಡ ತಮ್ಮ ಅಧಿಕಾರಿಗಳ ಮೂಲಕ ತನಿಖೆ ಮಾಡುವಂತಾದ್ದು ಆಗಲಿ. ಅದನ್ನು ಬಿಟ್ಟು ಈ

ರೀತಿಯಾಗಿ ಸುಮ್ಮನೆ ಸುಳ್ಳು ಆಪಾದನೆ ಮಾಡುವಂಥಾದ್ದು ಏನೋ ಒಂದು ಸ್ಟೇಟ್‌ಮೆಂಟ್ ಕೊಡುವಂಥಾದ್ದು ಮುಂತಾಗಿ ಆಗಬಾರದು. ಶಾಸಕರ ಮೇಲೆ ವಿನಾಕಾರಣ ಚಾರಿತ್ರ್ಯ ವಧೆ ಮಾಡುವಂಥಾದ್ದು ಆಗಬಾರದು. ಸರ್ಕಾರ ಇದರ ಬಗ್ಗೆ ಸ್ಪಂದಿಸಬೇಕಾಗುತ್ತದೆ.

ಛೇರ್ಮನ್:– ಶಾಸಕನಾಗಿ ನನಗೂ ಆ ನೋವು ಅರ್ಥವಾಗುತ್ತದೆ. ಈಗ ನಾವು ಸರ್ಕಾರದ ಉತ್ತರವನ್ನು ಕೇಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):– ಮಾನ್ಯ ಅಧ್ಯಕ್ಷರೆ, ಅನೇಕ ಸಲ ಹೊರಗಡೆ ನಡೆದಂಥ ವಿಷಯಗಳು ಮತ್ತು ರಾಜಕೀಯವಾಗಿ ಯಾವುದೇ ಪಕ್ಷದ ಮುಖಂಡರು ಇರಲಿ, ಅವರು ಕಾಂಗ್ರೆಸ್ ಪಕ್ಷದ ಮುಖಂಡರು ಇರಬಹುದು, ಬಿ.ಜೆ.ಪಿ. ಮುಖಂಡರು ಇರಬಹುದು ಅಥವಾ ಜನತಾದಳದ ಮುಖಂಡರು ಇರಬಹುದು. ಅವರು ಯಾವುದೇ ಪೊಲಿಟಿಕಲ್ ಪಾರ್ಟಿ ಮುಖಂಡರು ಹೊರಗಡೆ ಮಾತನಾಡಿದ್ದನ್ನು ಅಥವಾ ಭಾಷಣಗಳು ಮಾಡಿದ್ದನ್ನು ನಾವು ಇಲ್ಲಿ ಪ್ರಸ್ತಾಪಿಸಿದಾಗ, ಪ್ರತಿಯೊಂದಕ್ಕೂ ಉತ್ತರ ಕೊಡತಕ್ಕಂಥಾದ್ದು ಬಹಳ ಕಷ್ಟವಾಗುತ್ತದೆ. ಪೊಲಿಟಿಕಲಿ ಯಾರಾದರೂ ರೈಸ್ ಮಾಡಿದರೆ ಅದನ್ನೂ ಪೊಲಿಟಿಕಲಿ ಪೇಸ್ ಮಾಡಬೇಕು. ಆದರೆ, ಇಲ್ಲಿ ಸದನಕ್ಕೆ ಸಂಬಂಧಪಟ್ಟಿದ್ದರೆ ಅಥವಾ ಇಲ್ಲಿಯ ಸದಸ್ಯರಿದ್ದರೆ ಖಂಡಿತವಾಗಿಯೂ ನಾವು ಏನಾದರೂ ಹೇಳಬಹುದು. ಆದರೆ, ಯೂತ್ ಕಾಂಗ್ರೆಸ್‌ನವರು ಹೇಳಿದರು, ಜಿಲ್ಲಾ ಕಾಂಗ್ರೆಸ್‌ನವರು ಹೇಳಿದರು ಅಥವಾ ಬಿ.ಜೆ.ಪಿ. ಮುಖಂಡರು ಹೇಳಿದರು, ಜನತಾ ದಳದ ಮುಖಂಡರು ಹೇಳಿದರು ಎಂದು, ಅಲ್ಲಿಯ ಮಾತುಗಳನ್ನು ತಂದು ಇಲ್ಲಿ ಹೇಳಿ, ಅದಕ್ಕೆ ಪರಿಹಾರ ಕೇಳಿದರೆ ಬಹಳ ಕಷ್ಟ ಆಗುತ್ತದೆ. ಇದು ಅವರಿಗೂ ಕೂಡ ಗೊತ್ತಿದೆ. ತಾವು, ಲೋಕಾಯುಕ್ತಕ್ಕೆ ಕೊಡಬೇಕೆಂಬ ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದಿದ್ದೇವೆಂದು ಹೇಳಿದಿರಿ. ಖಂಡಿತವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಕಾನೂನು ಪ್ರಕಾರ ಅವರು ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತಾರೆ. ನಾನೂ ಕೂಡ ಅವರ ಗಮನಕ್ಕೆ ತರುತ್ತೇನೆ. ಆದರೆ, ಇದು ಸಾಧ್ಯವೇ? ಅನೇಕ ಸಾರಿ ಪೊಲಿಟಿಕಲಿ ಎಲ್ಲಾ ಜನ ಒಬ್ಬರಿಗೊಬ್ಬರು ಹೇಳತಕ್ಕಂಥಾದ್ದು ಇದೆ. ಆದರೆ, ಉತ್ತರವನ್ನು ಅಲ್ಲಿಯೇ ಕೊಡಬೇಕಾಗುತ್ತದೆ. ಅದು ಬಿಟ್ಟು ಈ ಫೋರಂನ್ನು ಬಳಸಿಕೊಂಡು, ಅದರ ಬಗ್ಗೆ ಹೇಳುವುದಕ್ಕೆ ಹೋದರೆ, ಅವನ ಪರವಾಗಿ ಉತ್ತರ ಹೇಳತಕ್ಕಂಥವರು ಯಾರು? ಏಕೆಂದರೆ, ಪೊಲಿಟಿಕಲ್ ಪಾರ್ಟಿ ಬೇರೆ, ಯಾರೋ ಒಬ್ಬ ಅಧಿಕಾರಿ ಹೇಳಿದ್ದರೆ, ನಾನು ಹೇಳಬಹುದು ಅಥವಾ ಯಾರಾದರೂ ಮಂತ್ರಿಗಳು ಹೇಳಿದ್ದರೆ, ಅವರ ಪರವಾಗಿ ನಾನು ಹೇಳಬಹುದು. ಆದರೆ ಆರ್ಗನೈಸೇಷನ್ ಪರವಾಗಿ ಅಥವಾ ಮತ್ತೊಂದು ಬೇರೆ ಬೇರೆಯಾದರೆ, ಇದೇನೂ ಪೊಲಿಟಿಕಲ್ ಫೋರಂ ಅಲ್ಲ. ನಾವೆಲ್ಲರೂ ಕೂಡ ಸದಸ್ಯರಿದ್ದೇವೆ. ಸದಸ್ಯರ ಹಕ್ಕು ಚ್ಯುತಿಯಾದರೆ ಅದಕ್ಕೆ ರೂಲ್ಸ್ ಇದೆ, ರೆಗ್ಯುಲೇಷನ್ಸ್ ಇದೆ. ತಾವು ಇದನ್ನು ನೋಡಬೇಕೇ ಹೊರತಾಗಿ ಒಬ್ಬರು ಯೂತ್ ಕಾಂಗ್ರೆಸ್‌ನವರು ಹೇಳಿದರು ಎಂದತಕ್ಷಣವೇ, ಅದಕ್ಕೆ ಸರ್ಕಾರ ಸ್ಪಂದಿಸಬೇಕೆಂದರೆ ಇದು ಕಷ್ಟವಾಗುತ್ತದೆ. ಇಂತಹ ಅನೇಕ ಅಲಿಗೇಷನ್ಸ್ ಒಬ್ಬರ ಮೇಲೆ ಒಬ್ಬರು ಹೊರಗಡೆ ಮಾಡತಕ್ಕಂಥಾದ್ದನ್ನು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದು ಅಷ್ಟೊಂದು ಸೂಕ್ತವಾಗುವುದಿಲ್ಲ. ಆದರೂ ಕೂಡ ತಾವು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕೆಂದು ಹೇಳಿದ್ದೀರಿ. ಖಂಡಿತವಾಗಿಯೂ ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಇದು ಒಬ್ಬ ಶಾಸಕನ ಪ್ರಶ್ನೆಯಾದ ಕಾರಣ ನಾನು ಇಷ್ಟೇ ವಿನಂತಿ ಮಾಡುವುದು. ನಾನು ಇದನ್ನು ರಾಜಕೀಯವಾಗಿ, ಅವರ ಮೇಲೆ ಅಕ್ಷನ್ ತೆಗೆದುಕೊಳ್ಳಿ ಎಂದು ಬಳಸುತ್ತಾ ಇಲ್ಲ. ಒಬ್ಬ ಶಾಸಕನಾಗಿ, ನಾನೂ ಕೂಡ ಭ್ರಷ್ಟಾಚಾರದಲ್ಲಿ ಮೌನವಹಿಸಿದ ಕಾರಣ, ಪರೋಕ್ಷವಾಗಿ ಭ್ರಷ್ಟಾಚಾರಕ್ಕೆ ಬೆಂಬಲ ಕೊಟ್ಟಿದ್ದಾರೆಂದು ಹೇಳತಕ್ಕ ಸಂದರ್ಭಗಳಲ್ಲಿ, ನಾನು ಸರ್ಕಾರವನ್ನು ಆಗ್ರಹ ಮಾಡುವುದು ಇಷ್ಟೆ. ತಾವು ತನಿಖೆ ನಡೆಸಿ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿ, ಯಾರು ರಾಜಕೀಯವಾಗಿ ನನ್ನ ಮೇಲೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ, ಅವರನ್ನು ನಾನು ರಾಜಕೀಯವಾಗಿ ನೋಡಿಕೊಳ್ಳುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ, ನೇರವಾಗಿ ಅಂತಹ ಇಲಾಖೆಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು, ತಕ್ಷಣ ವ್ಯವಸ್ಥೆ ಮಾಡಬೇಕು. ಲೋಕಾಯುಕ್ತದವರು ಕನಿಷ್ಟ ಒಂದು ತಿಂಗಳ ಅವಧಿಯೊಳಗೆ ಅದನ್ನು ತನಿಖೆ ಮಾಡಬೇಕು. ಮಾಡುತ್ತೇವೆಂದು ಹೇಳಿ, ಹಾಗೆಯೇ ಉಳಿಯುವಂಥ ಪ್ರಯತ್ನಗಳು ಆಗಬಾರದು ಎಂಬುದು ನಮ್ಮ ಆಗ್ರಹ. ರಾಜಕೀಯ ವ್ಯವಸ್ಥೆ ಬಗ್ಗೆ ನಾನು ಖಂಡಿತವಾಗಿಯೂ ಈ ಸದನದಲ್ಲಿ ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಆ ರೀತಿ ಭ್ರಷ್ಟಾಚಾರ ಉಂಟು ಎಂದು ಹೇಳುವುದು ಸಾರ್ವಜನಿಕ ವಲಯದಲ್ಲಿ ಬಂದ ಮೇಲೆ, ಆ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವಂಥ ಸಂದರ್ಭಗಳಲ್ಲಿ ನನ್ನ ಆಗ್ರಹ ಇಷ್ಟೆ. ತಾಲ್ಲೂಕು ಕಛೇರಿ, ಪುರಸಭೆ ಮೇಲೆ ಲೋಕಾಯುಕ್ತರಿಂದ ತಕ್ಷಣ ತನಿಖೆ ನಡೆಸಿ.

ಛೇರ್ಮನ್:- ಈಗಾಗಲೇ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರಲ್ಲಾ. Political action should be repulsed by polictical attacks only. There is a point in his reply.

Sri. D.V. Sadananda Gowda:- I do concede. I don't dispute that.

ಈ) ರಾಜ್ಯದಲ್ಲಿ ಗ್ರಾಮೀಣ ಕೃಪಾಂಕದ ಮೇಲೆ ನೇಮಕಾತಿಯಾದ ಪೈಕಿ ಗೃಹ ಇಲಾಖೆಯಲ್ಲಿ 13 ಮಂದಿಯನ್ನು ಕೆಲಸದಿಂದ ತೆಗೆದು ಹಾಕಿರುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ):- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 13,500 ಜನ ಗ್ರಾಮೀಣ ಕೃಪಾಂಕದಿಂದ ನೇಮಕಾತಿಯಾದರು. ಇದು ಕೋರ್ಟಿಗೆ ಹೋಗಿದ್ದು, ಈ 13,500 ಜನರನ್ನೂ ರಕ್ಷಣೆ ಮಾಡುತ್ತೇವೆಂದು ಸರ್ಕಾರ ಹೇಳಿದೆ. ಇದುವರೆಗೆ ಯಾರನ್ನೂ ತೆಗೆದಿಲ್ಲ. ಆದರೆ, ಇವರ ಇಲಾಖೆಯಲ್ಲಿ ಕೇವಲ 123 ಜನ ಆರಕ್ಷಕ ನಿರೀಕ್ಷಕರಲ್ಲಿ 13 ಜನರನ್ನು ಮಾತ್ರ ತೆಗೆದಿದ್ದಾರೆ. ಅವರನ್ನು ಏಕೆ ತೆಗೆದಿರಿ? ಏಕೆಂದರೆ, ಈಗಾಗಲೇ ಅವರನ್ನೆಲ್ಲಾ ಉಳಿಸಿಕೊಳ್ಳುತ್ತೇವೆಂದು ಹೇಳಿದ್ದೀರಿ. 13,500 ಜನರಲ್ಲಿ 13 ಜನರನ್ನು ಮಾತ್ರ ತೆಗಿದಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಈ ವಿಚಾರದಲ್ಲಿ ಸುಪ್ರೀಂಕೋರ್ಟಿಗೆ ಮತ್ತೆ ಕೆಲವರು ಹೋಗಿದ್ದಾರೆ. ಈ 13,500 ಜನರನ್ನೂ ತೆಗೆಯಿರಿ ಎಂದು ಕಂಟೆಂಪ್ಟ್ ಆಫ್ ಕೋರ್ಟ್ ಹಾಕಿದ್ದಾರೆ. ಇದು ಸುಪ್ರೀಂಕೋರ್ಟ್ ಮುಂದೆ ಪೆಂಡಿಂಗ್ ಇದೆ. ಅವರು 13 ಜನರ ಬಗ್ಗೆ ಅವರು ಹೇಳುತ್ತಿದ್ದಾರೆ. 13,500 ಜನರ ಸರ್ವೀಸ್ ಸೆಕ್ಯುರಿಟಿ ಏನಿದೆ,